# ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
# ಹಾಗೂ ವಿಶೇಷ ನ್ಯಾಯಾಲಯ, ಹಾವೇರಿ
## ಸ್ಪೆಷಲ್ ಎಸ್.ಸಿ./ಎಸ್.ಟಿ.53/2025

Pw-05

Cw-05

| | |
|---|---|
| ಸಾಕ್ಷಿದಾರರ ಹೆಸರುಃ | ಶ್ರೀ ಚಂದ್ರಪ್ಪ ಬನ್ನಿಹಟ್ಟಿ |
| ತಂದೆಃಗಂಡನ ಹೆಸರುಃ | ಶ್ರೀ ಹನುಮತಂಪ್ಪ |
| ವಯಸ್ಸುಃ | 39 ವರ್ಷ |
| ಉದ್ಯೋಗಃ | ಕೂಲಿ |
| ವಾಸ ಸ್ಥಳಃ | ವೈ.ಟಿ ಹೊನ್ನತ್ತಿ, ತಾಃ ರಾಣೇಬೆನ್ನೂರು |

**ದಿನಾಂಕ:03.02.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ**

1. ಈ ಕೇಸಿನ ಪಿರ್ಯಾದಿ ಗೊತ್ತು. ಈ ಕೇಸಿನ ಆರೋಪಿತರು ಸಹ ನನಗೆ ಗೊತ್ತು. ಅವರೆಲ್ಲರೂ ನಮ್ಮೂರಿನವರು. ನಾನು ಹಿಂದೂ ವಾಲ್ಮೀಕಿ ಜಾತಿಗೆ ಸೇರಿರುತ್ತೇನೆ. ಆರೋಪಿತರು ಹಿಂದೂ ಲಿಂಗವಂತ ಜಾತಿಗೆ ಸೇರಿರುತ್ತಾರೆ. ಈಗ್ಗೆ 6-7 ತಿಂಗಳ ಹಿಂದೆ ಬೆಳಿಗ್ಗೆ 10.00 ಗಂಟೆ ಸುಮಾರಿಗೆ ನಾನು, ಚಾಸಾ-1 ಮತ್ತು 4 ರವರು ಸೇರಿಕೊಂಡು ನಮ್ಮೂರಿನ ಗ್ರಾಮ ಪಂಚಾಯತಿ ಹತ್ತಿರ ಹೋದೆವು. ಆಗ ಗ್ರಾಮ ಪಂಚಾಯತಿಯ ಪಿಡಿಒ ಮತ್ತು ಗುತ್ತಿಗೆದಾರರು ಸೇರಿಕೊಂಡು ಪಂಚಾಯತಿ ಜಾಗವನ್ನು ಲೈನ್ ಔಟ್ ಮಾಡುತ್ತಿದ್ದರು. ಸದರಿ ಕೆಲಸವು ಮದ್ಯಾಹ್ನ 2.00 ಗಂಟೆಯತನಕ ಆಯಿತು.

2. ಆಗ ನಾನು, ಚಾಸಾ-1 ಮತ್ತು 4 ರವರು ಕಟ್ಟೆ ಹತ್ತಿರ ಕುಳಿತುಕೊಂಡಿದ್ದೆವು. ಆಗ ಆರೋಪಿತರೆಲ್ಲರೂ ಅಲ್ಲಿಗೆ ಒಟ್ಟಿಗೆ ಬಂದು ವಾಲ್ಮೀಕಿ ಸೂಳೇ ಮಕ್ಕಳಾ ಅಂತಾ ಬೈದು ಜಗಳ ತೆಗೆದು ಕೈಗಳಿಂದ ನನಗೆ, ಚಾಸಾ-1 ಮತ್ತು 4 ರವರಿಗೆ ಹೊಡೆದು, ಕೋಲಿನಿಂದ ಹೊಡೆದು ಗುದ್ದಿದರು. ಆರೋಪಿತರು ನಮ್ಮ ಜಾತಿ ಎತ್ತಿ ಬೈದು, ಜಾತಿ ನಿಂದನೆ ಮಾಡಿದರು. ಆರೋಪಿತರು ನೀವು ಮತ್ತೆ ಬಂದರೆ ನಿಮ್ಮನ್ನು ಕೊಲೆ ಮಾಡುತ್ತೇವೆಂದು ಜೀವ ಬೆದರಿಕೆ ಹಾಕಿದರು.

3. ಆರೋಪಿತರು ನಮಗೆ ಹೊಡಿ-ಬಡಿ ಮಾಡಿದ್ದರಿಂದ ನಮಗೆ ಗಾಯಗಳಾಗಿದ್ದು, ರಾಣೇಬೆನ್ನೂರು ಸರ್ಕಾರಿ ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದುಕೊಂಡಿರುತ್ತೇವೆ. ಈ ಪ್ರಕರಣದ ವಿಚಾರವಾಗಿ ಪೊಲೀಸರು ನನ್ನನ್ನು ವಿಚಾರಣೆ ಮಾಡಿ ನನ್ನ ಹೇಳಿಕೆಯನ್ನು ಪಡೆದುಕೊಂಡಿರುತ್ತಾರೆ.

**<u>ಪಾಟೀ ಸವಾಲುಃ 1 ರಿಂದ 6 ನೇ ಆರೋಪಿತರ ಪರವಾಗಿ ಶ್ರೀ ಎನ್.ಜಿ.ಹೆಚ್ ವಕೀಲರಿಂದಃ</u>**

4. ಆರೋಪಿತರು ನನಗೆ ಎದೆಗೆ ಮತ್ತು ಹೊಟ್ಟೆಗೆ ಹೊಡಿ-ಬಡಿ ಮಾಡಿರುತ್ತಾರೆ. ಆಗ ನನಗೆ ರಕ್ತಗಾಯ ಉಂಟಾಯಿತು. ಆರೋಪಿತರು ಹೊಡಿ-ಬಡಿ ಮಾಡಿದ್ದರಿಂದ ಚಾಸಾ-1 ಮತ್ತು 4 ರವರಿಗೂ ಸಹ ರಕ್ತಗಾಯಗಳಾದವು. ಆಗ ನಾವು 3 ಜನ ಹಾಕಿಕೊಂಡಿದ್ದ ಬಟ್ಟೆಗಳಿಗೆ ರಕ್ತ ತಾಗಿತ್ತು. ಪೊಲೀಸರು ನನ್ನನ್ನು ವಿಚಾರಣೆ ಮಾಡಿ ಹೇಳಿಕೆ ತೆಗೆದುಕೊಂಡಿರುತ್ತಾರೆ. ಆಗ ನಾನು ಪೊಲೀಸರಿಗೆ ನನ್ನ ರಕ್ತ ಹತ್ತಿದ ಬಟ್ಟೆಗಳನ್ನು ಕೊಡಲಿಲ್ಲ. ಆದರೆ ಚಾಸಾ-1 ಮತ್ತು 4 ರವರು ತಮ್ಮ ರಕ್ತ ಹತ್ತಿದ ಬಟ್ಟೆಗಳನ್ನು ಪೊಲೀಸರಿಗೆ ಕೊಟ್ಟಿರುತ್ತಾರೆ.

5. ನಾನು, ಚಾಸಾ-1 ಮತ್ತು 4 ರವರು ಕುಳಿತುಕೊಂಡಿದ್ದ ಕಟ್ಟೆಗೂ ಮತ್ತು ಪಂಚಾಯತಿ ಜಾಗಕ್ಕೂ 5 ಅಡಿ ಅಂತರ ಇರುತ್ತದೆ. ಪಂಚಾಯತಿ ಕಚೇರಿಯಲ್ಲಿ ಮನೆ ಕಂದಾಯ, ನೀರು ಮತ್ತು ಒಳಚರಂಡಿ ಕಂದಾಯ ಇವುಗಳನ್ನು ವಸೂಲಿ ಮಾಡಲು ಸಿಬ್ಬಂದಿ ಇರುತ್ತಾರೆ ಎಂದರೆ ನಿಜ. ಪಿಡಿಒ ರವರ ಜೊತೆ ಗುಮಾಸ್ತ ಇದ್ದರು ಎಂದರೆ ಸರಿಯಲ್ಲ. ಆದರೆ ಗುತ್ತಿಗೆದಾರರು ಇದ್ದರು. ನಮ್ಮೂರಿನ ಗ್ರಾಮ ಪಂಚಾಯತಿಯಲ್ಲಿ ಎಷ್ಟು ಜನ ಸಿಬ್ಬಂದಿಗಳಿರುತ್ತಾರೆಂದು ನನಗೆ ಗೊತ್ತಿಲ್ಲ.

6. ನಾನು, ಚಾಸಾ-1 ಮತ್ತು 4 ರವರು ಸೇರಿಕೊಂಡು ಆರೋಪಿತರಿಗೆ ಹೊಡಿ-ಬಡಿ ಮಾಡಿರುತ್ತೇವೆಂದರೆ ಸರಿಯಲ್ಲ. ಅದರಿಂದ ತಪ್ಪಿಸಿಕೊಳ್ಳುವ ಸಲುವಾಗಿ ಆರೋಪಿತರ ವಿರುದ್ಧ ನ್ಯಾಯಾಲಯದ ಮುಂದೆ ಪಿರ್ಯಾದಿ ಮಾತು ಕೇಳಿಕೊಂಡು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ. ನನಗೆ, ಚಾಸಾ-1 ಮತ್ತು 4 ರವರಿಗೆ ಸರ್ಕಾರದಿಂದ ಯಾವುದೇ ಪರಿಹಾರ ಬಂದಿಲ್ಲ. ನಾನು ಹೇಳುವ ಪ್ರಕಾರ ಆರೋಪಿತರು ಯಾರಿಗೂ ಸಹ ಬೈದಿಲ್ಲ, ಹೊಡಿ-ಬಡಿ ಮಾಡಿಲ್ಲ ಮತ್ತು ಜಾತಿ ನಿಂದನೆ ಮಾಡಿಲ್ಲ ಹಾಗೂ ಪ್ರಾಣ ಬೆದರಿಕೆ

ಹಾಕಿಲ್ಲ ಎಂದರೆ ಸರಿಯಲ್ಲ. ನಾನು, ಚಾಸಾ–1 ಮತ್ತು 4 ರವರು ಸಂಬಂಧಿಕರು ಎಂದರೆ ಸರಿಯಲ್ಲ. ನಾನು ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ. ಆರೋಪಿತರು ನಮಗೆ ಹೊಡೆಯಲು ಉಪಯೋಗಿಸಿದ ಕೋಲನ್ನು ನಾನು ಪೊಲೀಸರಿಗೆ ಕೊಟ್ಟಿಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು ಮತ್ತು ವಿಶೇಷ ನ್ಯಾಯಾಧೀಶರು ಹಾವೇರಿ.